# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂ.ವೈ.ಎಸ್–6556/2014

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು–560 001,
ದಿನಾಂಕ: 15/04/2017.
17.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರ ಅನ್ವಯ ಶಿಫಾರಸ್ಸು ವರದಿ

108

ವಿಷಯ: ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಬಿಳಿನೆಲೆ ಗ್ರಾಮದ ಸರ್ವೆ ನಂ. 6:1(ಪಿ3) ರಲ್ಲಿ 0.11 ಎಕರೆ ಜಮೀನಿನಲ್ಲಿ ಶ್ರೀ ಸುಧೀರ ಕುಮಾರ್ ಶೆಟ್ಟಿ ಬಿನ್ ಆನಂದ ಶೆಟ್ಟಿ ಎಂಬುವವರು ಅಕ್ರಮವಾಗಿ ನಿರ್ಮಿಸಿಕೊಂಡಿರುವ ವಾಣಿಜ್ಯ ಕಟ್ಟಡ ಹಾಗೂ ಕೊಳವೆ ಬಾವಿಯನ್ನು ತೆರವುಗೊಳಿಸುವ ಬಗ್ಗೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು, ನಿರ್ದೇಶಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ವರದಿಯ ನಡವಳಿಕೆ–ಕುರಿತು.,

*****

ಶ್ರೀ ರಮೇಶ್ ವಾಲ್ತಾಜೆ ಬಿನ್ ಲೇಟ್ ಕೊರಗಪ್ಪ ಗೌಡ, ವಾಲ್ತಾಜೆ ಮನೆ, ಬಿಳಿನೆಲೆ ಗ್ರಾಮ ಮತ್ತು ಅಂಚೆ, ಪುತ್ತೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, ಶ್ರೀ ಸುಧೀರ ಕುಮಾರ್ ಶೆಟ್ಟಿ, ಹಿಂದಿನ ಅಧ್ಯಕ್ಷರು ಮತ್ತು ಹಾಲಿ ಕೌನ್ಸಿಲ್ ಸದಸ್ಯರು, ಬಿಳಿನೆಲೆ ಗ್ರಾಮ, ಪುತ್ತೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ದಾಖಲಿಸಿ, ಪುತ್ತೂರು ತಾಲ್ಲೂಕಿನ ಬಿಳಿನೆಲೆ ಗ್ರಾಮದ ನೆಟ್ಟಣ ಎಂಬಲ್ಲಿ ರಾಜ್ಯ ಹೆದ್ದಾರಿಗೆ ಸಂಬಂಧಿಸಿದ ಸರ್ಕಾರಿ ಪರಂಬೋಕು ಜಮೀನಿನಲ್ಲಿ ಸದರಿ ಬಿಳಿನೆಲೆ ಗ್ರಾಮ ಪಂಚಾಯತ್‌ನ ಮಾಜಿ ಅಧ್ಯಕ್ಷ ಹಾಗೂ ಹಾಲಿ ಸದಸ್ಯ ಶ್ರೀ ಸುದೀರ್ ಕುಮಾರ್ ಶೆಟ್ಟಿ ಎಂಬುವವರು ರಾಜಕೀಯ ಪ್ರಭಾವ ಬಳಸಿ ಸರ್ವೆ ನಂ. 6:1(ಪಿ3) ರಲ್ಲಿ 0.11 ಎಕರೆ ಜಮೀನಿನಲ್ಲಿ ಅಕ್ರಮವಾಗಿ ವಾಣಿಜ್ಯ ಕಟ್ಟಡ ನಿರ್ಮಿಸಿದ್ದು ಹಾಗೂ ಅಕ್ರಮವಾಗಿ ಕೊಳವೆ ಬಾವಿಯನ್ನು ತೆಗೆಯಿಸಿರುತ್ತಾರೆಂದು ಆರೋಪಿಸಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ

Sd/-

1984ರ ಕಲಂ 9 ರಡಿಯಲ್ಲಿ ಪ್ರದತ್ತವಿರುವ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

109

2. ಆನಂತರ ಸದರಿ ದೂರಿನ ತನಿಖೆ ಕೈಗೊಳ್ಳಲು ಸದರಿ ಸಂಸ್ಥೆಯ ಪೋಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮಂಗಳೂರು ಇವರಿಗೆ ವಹಿಸಿದ್ದು, ಸದರಿಯವರು ತಮ್ಮ ವರದಿಯನ್ನು ದಿನಾಂಕ: 12/12/2016 ರಂದು ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ,

(1) ಕರ್ನಾಟಕ ಸರ್ಕಾರದ ದಿನಾಂಕ: 23/01/2014ರ ಪರಿಷ್ಕರಿಸಿದ ಸುತ್ತೋಲೆಯಲ್ಲಿ ಗ್ರಾಮ ಪಂಚಾಯತ್ ಪರಿಮಿತಿಯಲ್ಲಿ ರಾಜ್ಯ ಹೆದ್ದಾರಿಯ ದಾಖಲಿತ ರಸ್ತೆ ಭೂ ಗಡಿಯ ಅಂಚಿನಿಂದ 6 ಮೀ., ಎಂದು ಪರಿಷ್ಕರಣೆಯಾಗಿರುತ್ತದೆ.

(2) ದಿನಾಂಕ: 08/12/2016 ರಂದು ಸರ್ವೆಯರ್ ರವರೊಂದಿಗೆ ವಿವಾದಿ ಕಟ್ಟಡಕ್ಕೆ ಬೇಟಿ ನೀಡಿ ಸರ್ವೆ-ಅಳತೆ ಕಾರ್ಯ ಮಾಡಿದ್ದು, ಸರ್ವೆ ಅಳತೆ ಕಾರ್ಯವನ್ನು ನಿರ್ವಹಿಸಿದ ಸರ್ವೆಯರ್ ರವರು ಸದರಿ ವಿವಾದಿತ ಕಟ್ಟಡವು ರಾಜ್ಯ ಹೆದ್ದಾರಿಯ ದಾಖಲಿತ ರಸ್ತೆ ಭೂಗಡಿಯ ಅಂಚಿನಿಂದ 3.4 ಮೀಟರ್ ದೂರದಲ್ಲಿ ಇರುವುದಾಗಿ ತಿಳಿಸಿ ಭೂ ಗಡಿ ರೇಖೆಯನ್ನು ಗುರುತಿಸಿರುತ್ತಾರೆ.

(3) ಸದರಿ ವಿವಾದಿತ ಕಟ್ಟಡವು ಎನ್.ಸಿ.ಆರ್.ಎಸ್.ಆರ್. 252, 358/1991-92ರ ಆದೇಶದಂತೆ ಮಂಜೂರಾಗಿರುವ ಸರ್ವೆ ನಂ. 6/1ರ ಪೈಕಿ 0.11 ಎಕರೆ ಜಾಗದಲ್ಲಿದ್ದು, ಸದರಿ ಸ್ಥಳವು ಭೂಪರಿವರ್ತನೆಯಾಗಿದ್ದು, ವಿವಾದಿತ ಕಟ್ಟಡವು ರಾಜ್ಯ ಹೆದ್ದಾರಿಯ ದಾಖಲಿತ ರಸ್ತೆ ಭೂಗಡಿಯ ಅಂಚಿನಿಂದ 3.4 ಮೀಟರ್ ಇರುತ್ತದೆ ಹಾಗೂ ಪ್ರಸ್ತುತ ಹಾದು ಹೋಗುವ ರಾಜ್ಯ ಹೆದ್ದಾರಿಯ ಮದ್ಯದಿಂದ 22.0 ಮೀಟರ್ ಇರುತ್ತದೆ.

3. ಪೋಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮಂಗಳೂರು ರವರು ಸಲ್ಲಿಸಿರುವ ವರದಿಯನ್ನು ಎದುರುದಾರರಿಗೆ ಕಳುಹಿಸಿ, ಈ ಬಗ್ಗೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ತಿಳಿಸಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ, ದೂರಿನ ಆಪಾದನೆಗಳನ್ನು

ನಿರಾಕರಿಸಿರುತ್ತಾರೆ. ಪ್ರಸ್ತುತ ಹಂತದಲ್ಲಿ ಸದರಿ ಎದುರುದಾರರ ಆಕ್ಷೇಪಣೆಯನ್ನು ಒಪ್ಪಲಾಗುವುದಿಲ್ಲ.

110

4. ದೂರಿನಲ್ಲಿ ಇರುವ ಆಪಾದನೆ ಹಾಗೂ ದಾಖಲಾತಿಗಳನ್ನು ಪರಿಶೀಲಿಸಲಾಗಿ ಎದುರುದಾರರು ಈ ಕೆಳಕಂಡಂತೆ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

- ದೂರುದಾರರು ದೂರಿನಲ್ಲಿ ಎದುರುದಾರರು ರಾಜಕೀಯ ಪ್ರಭಾವ ಬಳಸಿ ಸರ್ವೆ ನಂ. 6:1(ಪಿ3) ರಲ್ಲಿ 0.11 ಎಕರೆ ಜಮೀನಿನಲ್ಲಿ ಅಕ್ರಮವಾಗಿ ವಾಣಿಜ್ಯ ಕಟ್ಟಡ ನಿರ್ಮಿಸಿಕೊಂದು ಹಾಗೂ ಅಕ್ರಮವಾಗಿ ಕೊಳವೆ ಬಾವಿಯನ್ನು ತೆಗೆಯಿಸಿರುತ್ತಾರೆ ಎಂಬುದು ದೂರುದಾರರ ಆಪಾದನೆಯಾಗಿದೆ.
- ಈ ಸಂಬಂಧ, ತನಿಖಾಧಿಕಾರಿಗಳು, ದಿನಾಂಕ: 08/12/2016 ರಂದು ಸರ್ವೆಯರ್ ರವರೊಂದಿಗೆ ವಿವಾದಿ ಕಟ್ಟಡಕ್ಕೆ ಬೇಟಿ ನೀಡಿ ಸರ್ವೆ-ಅಳತೆ ಕಾರ್ಯ ಮಾಡಿದ್ದು, ಸರ್ವೆ ಅಳತೆ ಕಾಯವನ್ನು ನಿರ್ವಹಿಸಿದ ಸರ್ವೆಯರ್ ರವರು ಸದರಿ ವಿವಾದಿತ ಕಟ್ಟಡವು ರಾಜ್ಯ ಹೆದ್ದಾರಿಯ ದಾಖಲಿತ ರಸ್ತೆ ಭೂಗಡಿಯ ಅಂಚಿನಿಂದ 3.4 ಮೀಟರ್ ದೂರದಲ್ಲಿ ಇರುವುದಾಗಿ ತಿಳಿಸಿ ಭೂ ಗಡಿ ರೇಖೆಯನ್ನು ಗುರುತಿಸಿರುತ್ತಾರೆ.
- ಸದರಿ ವಿವಾದಿತ ಕಟ್ಟಡವು ಎನ್.ಸಿ.ಆರ್.ಎಸ್.ಆರ್. 252, 358/1991-92ರ ಆದೇಶದಂತೆ ಮಂಜೂರಾಗಿರುವ ಸರ್ವೆ ನಂ. 6/1ರ ಪೈಕಿ 0.11 ಎಕರೆ ಜಾಗದಲ್ಲಿದ್ದು, ಸದರಿ ಸ್ಥಳವು ಭೂಪರಿವರ್ತನೆಯಾಗಿದ್ದು, ವಿವಾದಿತ ಕಟ್ಟಡವು ರಾಜ್ಯ ಹೆದ್ದಾರಿಯ ದಾಖಲಿತ ರಸ್ತೆ ಭೂಗಡಿಯ ಅಂಚಿನಿಂದ 3.4 ಮೀಟರ್ ಇರುತ್ತದೆ ಹಾಗೂ ಪ್ರಸ್ತುತ ಹಾದು ಹೋಗುವ ರಾಜ್ಯ ಹೆದ್ದಾರಿಯ ಮದ್ಯದಿಂದ 22.0 ಮೀಟರ್ ಇರುತ್ತದೆ.
- ಆದರೆ, ಕರ್ನಾಟಕ ಸರ್ಕಾರದ ದಿನಾಂಕ: 23/01/2014ರ ಪರಿಷ್ಕರಿಸಿದ ಸುತ್ತೋಲೆಯಲ್ಲಿ ಗ್ರಾಮ ಪಂಚಾಯತ್ ಪರಿಮಿತಿಯಲ್ಲಿ ರಾಜ್ಯ ಹೆದ್ದಾರಿಯ ದಾಖಲಿತ ರಸ್ತೆ ಭೂ ಗಡಿಯ ಅಂಚಿನಿಂದ 6 ಮೀ., ಎಂದು ಪರಿಷ್ಕರಣೆಯಾಗಿರುತ್ತದೆ.
- ಹೀಗಿರುವಾಗ ಎದುರುದಾರರು ಸರ್ವೆ ನಂ. 6:1(ಪಿ3) ರಲ್ಲಿ 0.11 ಎಕರೆ ಜಮೀನಿನಲ್ಲಿ ಅಕ್ರಮವಾಗಿ ವಾಣಿಜ್ಯ ಕಟ್ಟಡ ನಿರ್ಮಿಸಿಕೊಂಡು, ಇದು ಅಲ್ಲದೇ, ಕೊಳವೆ

Sd/-

ಬಾವಿಯನ್ನು ಸಹಾ ಕಾನೂನು ಬಾಹಿರವಾಗಿ ತೆಗೆಯುವ ಮೂಲಕ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

5. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಸಾರ್ವಜನಿಕ/ ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವರ್ತನೆ/ದುರ್ನಡತೆ ಎಸಗಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

6. ಎದುರುದಾರರಾದ ಶ್ರೀ ಸುಧೀರ್ ಕುಮಾರ್ ಶೆಟ್ಟಿ ರವರು ಸರ್ಕಾರಿ ನೌಕರರಾಗಿರುವುದಿಲ್ಲ, ಈ ಸಂಬಂಧ ಸದರಿಯವರ ವಿರುದ್ಧ ಕೆ.ಸಿ.ಎಸ್.ಆರ್. ನಿಯಮಾವಳಿಗಳಡಿಯಲ್ಲಿ ಕ್ರಮ ಜರುಗಿಸಲು ಸಾದ್ಯವಿಲ್ಲದೇ ಇರುವ ಕಾರಣ, ಸದರಿಯವರು ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಬಿಳಿನೆಲೆ ಗ್ರಾಮದ ಸರ್ವೆ ನಂ. 6:1(ಪಿ3) ರಲ್ಲಿ 0.11 ಎಕರೆ ಜಮೀನಿನಲ್ಲಿ ಶ್ರೀ ಸುಧೀರ ಕುಮಾರ್ ಶೆಟ್ಟಿ ಬಿನ್ ಆನಂದ ಶೆಟ್ಟಿ ಎಂಬುವವರು ಅಕ್ರಮವಾಗಿ ನಿರ್ಮಿಸಿಕೊಂಡಿರುವ ವಾಣಿಜ್ಯ ಕಟ್ಟಡ ಹಾಗೂ ಕೊಳವೆ ಬಾವಿಯನ್ನು ತೆರವುಗೊಳಿಸುವ ಬಗ್ಗೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು, ನಿರ್ದೇಶಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

7. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984, ಕಲಂ 12(2) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ಈ ವರದಿ ಮುಟ್ಟಿದ ದಿನಾಂಕದಿಂದ **ಒಂದು ತಿಂಗಳ ಅವಧಿಯೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲೂ ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

13/11/17.

(ನ್ಯಾಯಮೂರ್ತಿ ಸುಭಾಷ್ ಬಿ. ಅಡಿ)
ಉಪಲೋಕಾಯುಕ್ತರು-2,
ಕರ್ನಾಟಕ ರಾಜ್ಯ, ಬೆಂಗಳೂರು.